Tourism Development Corporation Limited for the year 1986-87.

as required under Section 619(A) of the Companies Act, 1956.

V. ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) Sri Ramanatha Rai (Minister of State for Home)ರವರ ಪರವಾಗಿ I beg to lay:-

1. Notification No. HD 110 CNA 93 dated 6.8.1993.

Extension of time of No Objection Certificate to Sri Renuka. Semi-permanent talkies, Rona, Dharwad District.

2. Order No. HD 148 CNA 93 dated 16.8.1993.

Grant of permisiion to West Cost Papers Mills, Dandeli, North Canara District to exhibit 35mm film in their auditorium.

as required under Section 22 of the Karnataka Cinema (Regulation) Act, 1964.

ಅಧ್ಯಕ್ಷರು : – ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ : – ಪ್ರಶ್ನೋತ್ತರ ಅವಧಿಯಲ್ಲಿ ಎಲ್ಲರ ಪ್ರಶ್ನೆಗಳೇನ್ನೂ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಆರ್.ಎನ್. ನಾಯಕ್(ಭಟ್ಕಳ) : –ಸನ್ಮಾನ್ಯ ಅಧ್ಯಕ್ಷರೇ, ನಾವು ನಿಯಮಾವಳಿಯ ಪ್ರಕಾರ ನಿಗದಿತ ವೇಳೆಯಲ್ಲಿ ಪ್ರಶ್ನೆಗಳನ್ನು ಕಳುಹಿಸಿಕೊಡುತ್ತೇವೆ. ಅದು ಅನಂತರ ಪ್ರಶ್ನೆಗಳ ಪಟ್ಟಿಯಲ್ಲಿ ಬರುತ್ತದೆ. ಆದರೆ ಇಲ್ಲಿ ಪ್ರಶ್ನೆಯನ್ನು ಕಳುಹಿಸದೇ ಇದ್ದವರು, ಪ್ರಶ್ನೆಗೆ ಸಂಬಂಧಪಡದೇ ಇದ್ದವರು ಮಧ್ಯೆಮಧ್ಯೆ ಎದ್ದುನಿಂತು ಬೇರೆಬೇರೆ ಪ್ರಶ್ನೆಗಳನ್ನು ಮತ್ತು ಉಪ-ಪ್ರಶ್ನೆಗಳನ್ನು ಕೇಳುತ್ತಿರುತ್ತಾರೆ. ಇದರಿಂದ ಪ್ರಶ್ನೋತ್ತರದ ಒಂದು ಗಂಟೆಯ ಅವಧಿಯು ಅನಾವಶ್ಯಕವಾಗಿ ಕಳೆದುಹೋಗುತ್ತಿದೆ. ಇದರಿಂದ ತಮಗೂ ಸಹ ತೊಂದರೆಯಾಗುತ್ತಿದೆ. ಬಹಳ ಜನರು ಈ ರೀತಿ ಉಪ-ಪ್ರಶ್ನೆಗಳನ್ನು ಮತ್ತು ಬೇರೆಬೇರೆ ಪ್ರಶ್ನೆಗಳನ್ನು ಮಧ್ಯೆಮಧ್ಯೆ ಎದ್ದುನಿಂತು ಕೇಳುತ್ತಿರುತ್ತಾರೆ. ಆದ್ದರಿಂದ ನಿಯಮಾವಳಿಯನ್ನು ಅನುಸರಿಸಿ ಮಾತನಾಡುವವರಿಗೆ ರಕ್ಷಣೆಯೇ ಸಿಗುತ್ತಿಲ್ಲ. ಮಧ್ಯೆ ಮಧ್ಯೆ ಬೇರೆಬೇರೆ ಕಾರಣಗಳನ್ನು ಕೊಟ್ಟು ಎದ್ದುನಿಂತು ಮಾತನಾಡುವುದನ್ನು ತಾವೂ ಸಹ ನೋಡುತ್ತಿದ್ದೀರಿ. ಅಂಥವರಿಗೆ ಇಲ್ಲಿ ಮಾತನಾಡಲು ಅವಕಾಶ ಸಿಗುತ್ತಿದೆ. ಈಗ ನಾವು ಏನು ಮಾಡಬೇಕು? ನಾವು ಇದರ ಬಗ್ಗೆ ಏನು ಮಾಡಬೇಕೆಂದು ತೀರ್ಮಾನವನ್ನು ತಾವು ಕೊಡಬೇಕು. ಈಗ ನನ್ನ ಪ್ರಶ್ನೆ ಬಂದಿದೆ, ಆದರೆ ಇಂಥ ಸಮಯದಲ್ಲಿ ಮಧ್ಯೆಮಧ್ಯೆ ಬೇರೆಯವರು ಮಾತನಾಡುವುದರಿಂದ ನಮ್ಮ ಸಮಯ ಮತ್ತು ಸರ್ಕಾರದ ಸಮಯ ಹೋಗುತ್ತಿದೆ. ಆದ್ದರಿಂದ ದಯಮಾಡಿ ನನಗೆ 2-3 ನಿಮಿಷ ಪ್ರಶ್ನೆಯನ್ನು ಕೇಳಲು ಅವಕಾಶವನ್ನು ಮಾಡಿಕೊಡುತ್ತೀರಾ ಎಂದು ಎಲ್ಲರ ಪರವಾಗಿ ಕೇಳುತ್ತಿದ್ದೇನೆ. ಇಲ್ಲಿ ಬರೇ ಬಾಯಿ ಬಲವಾಗಿದ್ದವರದ್ದು ಮಾತ್ರ ನಡೆಯುತ್ತಿದೆ, ನಮ್ಮಂಥ ಬಾಯಿ ಇಲ್ಲದವರು ಸುಮ್ಮನೇ ಕುಳಿತುಕೊಳ್ಳಬೇಕಾಗುತ್ತದೆ. ನಿಯಮಬದ್ಧವಾಗಿರುವವರು ಇಲ್ಲಿ ಸುಮ್ಮನೇ ಕುಳಿತುಕೊಳ್ಳಬೇಕಾಗುತ್ತದೆ; ಯಾರು ನಿಯಮದ ಹೊರಗೆ ಹೋಗುತ್ತಾರೆ ಅವರಿಗೆ ಮಾತನಾಡಲು ಅವಕಾಶಗಳು ಸಿಗುತ್ತಿವೆ. ಆದ್ದರಿಂದ ತಾವು ದಯಮಾಡಿ ಇದರ ಬಗ್ಗೆ ತೀರ್ಮಾನವನ್ನು ಕೊಟ್ಟು ನಮಗೆ

ಅವಕಾಶವನ್ನು ಮಾಡಿಕೊಡಬೇಕು. ಆ ರೀತಿ ಮಾಡಲು ತಮಗೆ ಆಗುತ್ತದೋ ಅಥವಾ ಇಲ್ಲವೋ ಎಂಬ ಬಗ್ಗೆ ತೀರ್ಮಾನಕೊಟ್ಟರೆ ಒಳ್ಳೆಯದು. ನನ್ನ ಪ್ರಶ್ನೆಯನ್ನು ಈಗ ಕೇಳಬಹುದೋ ಅಥವಾ ಇಲ್ಲವೋ? ನಾನು ನಿಯಮದ ಪ್ರಕಾರ ಇದ್ದೇನೋ ಅಥವಾ ನಿಯಮದ ಹೊರಗೆ ಇದ್ದೇನೋ? ನಾನು ನಿಯಮದ ಪ್ರಕಾರ ಪ್ರಶ್ನೆಯನ್ನು ಕೇಳಲಿಲ್ಲ ಹಾಗೂ ಮಧ್ಯೆಮಧ್ಯೆ ಎದ್ದುನಿಂತು ನಿಮಗೆ ತೊಂದರೆಯನ್ನು ಕೊಟ್ಟಿದ್ದೇನೆ ಎನ್ನುವ ತೀರ್ಮಾನವನ್ನು ತಾವು ಕೊಟ್ಟರೆ ನಾನು ಕುಳಿತುಕೊಳ್ಳಬೇಕಾಗುತ್ತದೆ. ತಾವು ನನಗೆ ಪರಿಹಾರವನ್ನು ಒದಗಿಸಿಕೊಡಬೇಕು. ನಾವು ಪ್ರಶ್ನೆಗಳನ್ನು ಕಳುಹಿಸಿಕೊಡುತ್ತೇವೆ. ಆದರೆ

12.35 ಪಿ.ಎಂ.

ಇಲ್ಲಿ ನನ್ನ ಪ್ರಶ್ನೆಗಳಿಗೆ ಉತ್ತರ ಬರುತ್ತಿಲ್ಲ. ಬಂದರೂ ಸಹ ಉಪಪ್ರಶ್ನೆ ಕೇಳಲು ತಾವು ಅವಕಾಶವನ್ನೂ ಕೊಡುತ್ತಿಲ್ಲ. ಇದೇ ರೀತಿ ಬಹಳ ಜನ ಸದಸ್ಯರಿಗೆ ಆಗಿದೆ. ನಾವು ಇನ್ನು ಮುಂದೆ ಏನು ಮಾಡಬೇಕು? ನಾವು ಪ್ರಶ್ನೆಗಳನ್ನು ಕಳುಹಿಸಬಾರದೇ? ಇದಕ್ಕೆ ತಾವೇನಾದರೂ ಉತ್ತರ ಕೊಡಬೇಕು.

ಅಧ್ಯಕ್ಷರು :- ಪ್ರಶ್ನೋತ್ತರ ಕಾಲ 1 ಗಂಟೆಯಿರುತ್ತದೆ. ನಮ್ಮ ನಿಯಮದ ಪ್ರಕಾರ ದಿನಕ್ಕೆ 20 ಪ್ರಶ್ನೆಗಳನ್ನು ತೆಗೆದುಕೊಳ್ಳಬೇಕೆಂದಿದೆ. ಸುಮಾರಾಗಿ ಒಂದೊಂದು ಪ್ರಶ್ನೆಯನ್ನು 2-3 ನಿಮಿಷದಲ್ಲಿ ಮುಗಿಸಬೇಕಾಗುತ್ತದೆ. ಯಾರು ಪ್ರಶ್ನೆಯನ್ನು ಕೇಳಿರುತ್ತಾರೆ, ಅವರಿಗೆ ಪ್ರಾಮುಖ್ಯತೆಯನ್ನು ಕೊಟ್ಟು 2-3 ಉಪಪ್ರಶ್ನೆಗಳನ್ನು ಕೇಳುವುದಕ್ಕೆ ನಾನು ಅವಕಾಶ ಕೊಡುತ್ತಿದ್ದೇನೆ. ಆದರೆ ಕೆಲವೊಮ್ಮೆ ಎಲ್ಲರೂ ಉಪಪ್ರಶ್ನೆಗಳನ್ನು ಕೇಳಬೇಕೆಂದು ಕೈ ಎತ್ತುತ್ತಾರೆ. ಆದಕ್ಕೆ ಪ್ರಾಮುಖ್ಯತೆ ನೋಡಿಕೊಂಡು 1-2 ಉಪ ಪ್ರಶ್ನೆ ಕೇಳಲು ಅವಕಾಶ ಕೊಡಬಹುದು. ಆದರೆ ಒಂದು ಪ್ರಶ್ನೆಯನ್ನು 15 ನಿಮಿಷ ಮುಂದುವರಿಸುತ್ತಾ ಹೋದರೆ ಪ್ರಶ್ನೋತ್ತರ ಕಾಲದಲ್ಲಿ ಬರತಕ್ಕಂತಹ ಇತರೇ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ. ಮಾನ್ಯ ಸದಸ್ಯರುಗಳು ಇದಕ್ಕೆ ಸಹಕರಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ) :- ನಮ್ಮ ಗಮನಕ್ಕೆ ಬಂದಿರತಕ್ಕಂಥಾದ್ದು ತಾವು ರೂಲಿಂಗ್ ಕೊಡುವುದಕ್ಕಿಂತ ಮುಂಚೆ ಈ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ತಿಳುವಳಿಕೆ ಇಲ್ಲವೇ ನಿರ್ದೇಶನ ಕೊಡಲಿಕ್ಕೆ ಮುಂಚೆ ನಮ್ಮ ಸಮಸ್ಯೆಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ನಾವು ಯಾರೂ ಈ ಸದನದ ಅಮೂಲ್ಯವಾದ ವೇಳೆಯನ್ನು ವ್ಯಯ ಮಾಡಬೇಕೆಂದು ಬಯಸುವುದಿಲ್ಲ. ಒಂದು ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕಾದರೆ 20-25 ನಿಮಿಷ ಸಮಯ ತೆಗೆದುಕೊಂಡಂತಹ ಉದಾಹರಣೆಗಳೂ ಇವೆ. ಅಂತಹ ಕೆಲವು ಮಂತ್ರಿಗಳು ಇಲ್ಲೇ ಈ ಸಭೆಯಲ್ಲೇ ಕುಳಿತಿದ್ದಾರೆ. ಆದರೆ ನಾನು ಅವರ ಹೆಸರನ್ನು ಹೇಳಲು ಹೋಗುವುದಿಲ್ಲ. ಅವರು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಪಾಯಿಂಟೆಡ್ ಆಗಿ ನೀವು ಆ ಪ್ರಶ್ನೆ ಕೇಳಿಲ್ಲ, ಇಟ್ ಡಸ್ ನಾಟ್ ಅರೈಸ್ ಎಂದು ಹೇಳಿದರೆ ನಾವು ಕುಳಿತುಕೊಳ್ಳುತ್ತೇವೆ. ನಮಗೆ ಪಾಯಿಂಟೆಡ್ ಆನ್ಸರ್ ಬೇಕು. ಮಂತ್ರಿಗಳೂ ಸಹ ಅಧಿಕಾರಿಗಳ ಜೊತೆಯಲ್ಲಿ ಈ ಸದನಕ್ಕೆ ಬರುವುದಕ್ಕಿಂತ ಮುಂಚೆ ಅವರ ಜೊತೆ ಕುಳಿತುಕೊಂಡು ಚರ್ಚೆ ಮಾಡಿ ಸಂಬಂಧಪಟ್ಟ ಜಿಲ್ಲೆಗಳ ಬಗ್ಗೆ ಅಲ್ಲಿರತಕ್ಕಂತಹ ಅಧಿಕಾರಿಗಳ ಜೊತೆಯಲ್ಲಿ ಸಂಪರ್ಕ ಮಾಡಿ ವಸ್ತುಸ್ಥಿತಿಯೇನಿದೆ ಎಂದು ತಿಳಿದುಕೊಂಡು ಬಂದು ಈ ಸದನಕ್ಕೆ ತಿಳಿಸಿದರೆ ಸರಕಾರಕ್ಕೆ ಉಪಯೋಗವಾಗುತ್ತದೆ ಮತ್ತು ಜನಗಳಿಗೂ ಉಪಯೋಗವಾಗುತ್ತದೆ. ತಮಗೂ ಸಹ ವೇಳೆ ಉಳಿಯುತ್ತದೆ. ದಯಮಾಡಿ ಸದಸ್ಯರಿಗೆ ನಿರ್ದೇಶನ ಕೊಡುವುದಕ್ಕಿಂತ ಮುಂಚೆ ಈ ಸರ್ಕಾರದ ಸಚಿವ ಸಂಪುಟದ ಸದಸ್ಯರಿಗೂ ಸಹ ತಿಳುವಳಿಕೆ ಕೊಡಬೇಕೆಂದು ನಾನು ಒತ್ತಾಯ

ಮಾಡುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : – ನಾವು ಪ್ರಶ್ನೆ ಹಾಕಬೇಕಾದರೆ ಕಷ್ಟಪಟ್ಟು ಮಾಹಿತಿ ಸಂಗ್ರಹಿಸಿ ಪ್ರಶ್ನೆ ಹಾಕಿರುತ್ತೇವೆ. ಆ ಪ್ರಶ್ನೆಗೆ ಉತ್ತರ ಬರುತ್ತದೆ. ಪ್ರಶ್ನೆಗೆ ಉತ್ತರ ಬಂದಿದ್ದರೂ ನಾವು ಉಪಪ್ರಶ್ನೆ ಕೇಳದಿದ್ದರೆ ನಾವು ಜನರಿಗೆ ಮೋಸ ಮಾಡಿದ ಹಾಗಾಗುತ್ತದೆ. ರಾಜ್ಯದ ಜನರಿಗೆ ಮೋಸ ಮಾಡಿದ ಹಾಗಾಗುತ್ತದೆ. ಇಲ್ಲಿನ ಅನೇಕ ಹಿರಿಯ ಸದಸ್ಯರಿಗೆ ಬೇರೆಬೇರೆ ಸಲ ಅವಕಾಶ ಕೊಡುತ್ತೀರಿ. ಕೊಡಬಾರದೆಂದು ನಾನು ಹೇಳುತ್ತಿಲ್ಲ. ದಯಮಾಡಿ ಅದೇ ರೀತಿ ಬೇರೆ ಸದಸ್ಯರಿಗೂ ಅವಕಾಶಕೊಡತಕ್ಕಂತಹ ವಿಚಾರದಲ್ಲಿ ತಾವು ಗಮನ ಹರಿಸಬೇಕು. ಸಚಿವರುಗಳು ಏನು ದೊಡ್ಡ ಉತ್ತರವನ್ನು ಕೊಡುತ್ತಾರೆ ಅದಕ್ಕೆ ಕಡಿವಾಣ ಹಾಕತಕ್ಕಂತಹ ವ್ಯವಸ್ಥೆ ಆಗಬೇಕು. ಒಂದು ಪ್ರಶ್ನೆ ತೆಗೆದುಕೊಂಡರೆ ಅದರ ಮೇಲೆ ಅರ್ಧ ಗಂಟೆ ಭಾಷಣ ಮಾಡುತ್ತಾರೆ. ಅದಕ್ಕೆ ಕಡಿವಾಣ ಹಾಕಬೇಕು. ನಾವು ಕಿರಿಯ ಸದಸ್ಯರಿದ್ದೇವೆ; ಅನೇಕ ವಿಚಾರಗಳನ್ನು ತಿಳಿಯಬೇಕೆಂಬ ಆಸೆ ನಮಗೂ ಇದೆ. ಅನೇಕ ಸಾರಿ ಸರಕಾರದಿಂದ ಸರಿಯಾದಂತಹ ಉತ್ತರ ಕೊಡತಕ್ಕಂತಹ ವ್ಯವಸ್ಥೆ ಇಲ್ಲ. ಸರಿಯಾದ ಉತ್ತರ ಕೊಡತಕ್ಕಂತಹ ಕಟ್ಟುನಿಟ್ಟಾದ ವ್ಯವಸ್ಥೆಯಾಗಬೇಕು.

ಶ್ರೀ ವಾಟಾಳ್‌ನಾಗರಾಜ್ : – ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನ ಒಂದು ಸಣ್ಣ ಮನವಿ; ಅದು ತಮಗೆ ಸಹಾಯವಾಗುತ್ತದೆ. ಮೊದಲು ಈ ಶಾಸನಸಭೆ ಪ್ರಾರಂಭವಾದಾಗ 3 ದಿನಗಳ ಕಾಲ ಬಂದಂತಹ ಪ್ರಶ್ನೆಗಳು ಇನ್ನೂ ಜೀವಂತವಾಗಿದೆಯೇ ಅಥವಾ ಆ ಪ್ರಶ್ನೆಗಳಿಗೆ ಇನ್ನೂ ಜೀವ ಕೊಡಬಹುದೇ ಅಥವಾ ಆ ಪ್ರಶ್ನೆಗಳು ಸತ್ತುಹೋದವೇ? ಈ ಬಗ್ಗೆ ಯಾವುದೇ ತೀರ್ಮಾನಕ್ಕೆ ತಾವು ಇನ್ನೂ ಬಂದಿಲ್ಲ. ಅನೇಕ ಸಾರಿ ಈ ಸಭೆಯನ್ನು ಮುಂದೂಡುವಾಗ ಈ ಪ್ರಶ್ನೆಗಳನ್ನು ತಾವು ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದೇವೆ. ನೀವು ಇದರ ಬಗ್ಗೆ ಖಚಿತವಾದ ಅಭಿಪ್ರಾಯವನ್ನು ಕೊಟ್ಟಿಲ್ಲ. ಇನ್ನು ಎರಡನೆಯದಾಗಿ ನಮ್ಮ ಪ್ರಶ್ನೆಗಳು ಬರತಕ್ಕದ್ದೇ ಒಂದು ದೊಡ್ಡ ಅದೃಷ್ಟ. ಕಳೆದ 3 ದಿವಸದ ಹಿಂದೆ ನಮ್ಮ ಪ್ರಶ್ನೆಗಳು ಬಂದುವು. ಆದರೆ ಇವತ್ತು ನಮಗೆ ಪ್ರಶ್ನೆಗಳೇ ಇಲ್ಲ. ನಾವು ಹಾಕಿದಂಥ ಅನೇಕ ಅಮೂಲ್ಯ ಪ್ರಶ್ನೆಗಳು ಬಂದಿವೆ. ಆದ್ದರಿಂದ ಆ ಪ್ರಶ್ನೆಗಳ ಪರಿಸ್ಥಿತಿ ಏನು? ಅವುಗಳನ್ನು ಯಾವತ್ತು ತೆಗೆದುಕೊಳ್ಳುತ್ತೀರಿ ಎಂಬುದನ್ನು ತಾವು ಹೇಳಬೇಕು ಮತ್ತು ಮಾನ್ಯ ಸಂಸದೀಯ ಮಂತ್ರಿಗಳು ಈ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : – ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯರವರು ಹೇಳಿದ್ದರಲ್ಲೂ ಸತ್ಯಾಂಶ ಇದೆ. ಆದರೆ ಪ್ರಶ್ನೆಗಳನ್ನು ಕೇಳುವವರು ಉಪಪ್ರಶ್ನೆಗಳನ್ನೇ ಒಂದೊಂದು ಭಾಷಣವನ್ನಾಗಿ ಮಾಡುತ್ತಾರೆ. ಕೆಲವರು ಬಹಳ ದೊಡ್ಡ ಪ್ರಶ್ನೆಗಳನ್ನು ಕೇಳುತ್ತಾರೆ. ಕೆಲವರು ಬಹಳ ಸರಿಯಾದ ಉತ್ತರವನ್ನು ಕೊಡುತ್ತಾರೆ. ಇನ್ನು ಎರಡೆನೆಯದಾಗಿ ಮಾನ್ಯ ಆರ್.ಎನ್. ನಾಯಕರು ಒಂದು ಬಹಳ ಪ್ರಾಮುಖ್ಯವಾದ ವಿಷಯವನ್ನು ಎತ್ತಿದರು. ನಿಯಮದ ಪ್ರಕಾರ ಹೋಗುವಂಥ ಸದಸ್ಯರಿಗೆ ಇಲ್ಲಿ ಅವಕಾಶ ಸಿಕ್ಕುತ್ತಿಲ್ಲ ಎಂದು. ಮಾನ್ಯ ವಾಟಾಳ್‌ನಾಗರಾಜ್‌ರವರನ್ನು ನೋಡಿದಾಗ ನನಗೆ ಒಂದು ಅನುಮಾನ ಬಂತು. ಅವರ ಸೀಟಿನಲ್ಲಿ ಏನೋ ಒಂದು ಸ್ಪ್ರಿಂಗ್ ಇಟ್ಟಿದ್ದಾರೋ ಏನೋ ಎಂದು. ಯಾವುದೇ ಪ್ರಶ್ನೆಬಂದರೂ ಅವರು ಪಟ್ ಎಂದು ಎದ್ದುನಿಂತುಬಿಡುತ್ತಾರೆ.

ಶ್ರೀ ವಾಟಾಳ್‌ನಾಗರಾಜ್ : – ಮಾನ್ಯ ಅಧ್ಯಕ್ಷರೆ, ಅವರ ಬಗ್ಗೆ ನನಗೆ ಬಹಳ ಗೌರವ ಇದೆ.

ಆದರೆ ಅವರ ಮಾತಿನ ಧಾಟಿ ಬಗ್ಗೆ ಹೇಳಬೇಕಾಗಿದೆ. ನಾನು ಈ ಸದನದಲ್ಲಿ 67 ಮತ್ತು 70ನೇ ಇಸವಿಯಲ್ಲಿ ಇದ್ದಂಥ ಒಬ್ಬ ಹಿರಿಯ ಸದಸ್ಯ. ನನಗೂ ಈ ಸಭೆಯ ನಿಯಮ ಗೊತ್ತಿದೆ. ಒಂದು ಗಾದೆ ಇದೆ. ಮಾರಿಯ ಕಣ್ಣು ಹೋತನಮೇಲೆ ಅಂತ. ಈ ಮಾರಿಯ ಕಣ್ಣು ಹೋತನಮೇಲೆ ಬೀಳಬಾರದು. ಅವರು ಹಿರಿಯರು. ಅವರ ಬಗ್ಗೆ ಆಗಲಿ, ಮಾನ್ಯ ರಂಗನಾಥ್‌ರವರ ಬಗ್ಗೆಯಾಗಲಿ, ಅಥವಾ ಮಾನ್ಯ ರಾಜಶೇಖರಮೂರ್ತಿಯವರ ಬಗ್ಗೆ ಆಗಲಿ, ಮಾನ್ಯ ಫೋರ್ಪಡೆಯವರ ಬಗ್ಗೆ ಆಗಲಿ ಏನೇ ಮಾತನಾಡಿದರೂ ನಾವು ಗೋಪ್ಯವಾಗಿ ಕುಳಿತುಕೊಳ್ಳುತ್ತೇವೆ. ಅದು ನಮ್ಮ ಸೌಜನ್ಯ. ಆ ಸೌಜನ್ಯವನ್ನು ಅವರು ದುರುಪಯೋಗಪಡಿಸಿಕೊಳ್ಳಬಾರದು.

ಅಧ್ಯಕ್ಷರು :- ಮಾನ್ಯ ಸದಸ್ಯರು ಬಹಳ ಕಷ್ಟಪಟ್ಟು ತಮ್ಮ ಕ್ಷೇತ್ರದ ಬಗ್ಗೆ ಪ್ರಶ್ನೆಗಳನ್ನು ಕೇಳಿರುತ್ತೀರಿ. ಅದಕ್ಕೆ ಸ್ವಲ್ಪಮಟ್ಟಿಗಾದರೂ ಪರಿಹಾರ ಸಿಕ್ಕಬೇಕೆಂಬುದೇ ನನ್ನ ಇಚ್ಛೆ. ನಾನೂ ಕೂಡ ಅದಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇನೆ. ತಾವೂ ಕೂಡ ಅದಕ್ಕೆ ಸಹಕಾರವನ್ನು ಕೊಡಬೇಕು. ನಾನು ಸರ್ಕಾರದವರಿಗೂ ಹೇಳುತ್ತೇನೆ. ಮಂತ್ರಿಮಂಡಲದವರು ಉತ್ತರಗಳನ್ನು ಭಾಷಣವನ್ನಾಗಿ ಪರಿವರ್ತನೆ ಮಾಡಬಾರದು. ಪ್ರಶ್ನೆಗೆ ಅವಶ್ಯಕವಾಗಿರುವಷ್ಟು ಮಾತ್ರ ಉತ್ತರವನ್ನು ಕೊಡುವುದರಿಂದ ನಮಗೆ ಹೆಚ್ಚು ಸಮಯ ಸಿಕ್ಕುತ್ತದೆ. ಪಟ್ಟಿಯಲ್ಲಿ ಏನು ಪ್ರಶ್ನೆಗಳನ್ನು ಹಾಕಿರುತ್ತೇವೆ ಅಷ್ಟು ಪ್ರಶ್ನೆಗಳನ್ನೂ ಪೂರ್ತಿ ಮಾಡುವುದಕ್ಕೆ ನಮಗೆ ಅನುಕೂಲವಾಗುತ್ತದೆ. ಅದಕ್ಕೆ ವಿರೋಧಪಕ್ಷದವರಾಗಲಿ, ಆಡಳಿತ ಪಕ್ಷದವರಾಗಲಿ, ಪ್ರಶ್ನೆಗಳನ್ನು ಕೇಳುವವರು ಮನೆಗಳಲ್ಲಿ ಅದರ ಬಗ್ಗೆ ಅಭ್ಯಾಸಮಾಡಿಕೊಂಡು ಬರಬೇಕು. ಉಪಪ್ರಶ್ನೆಗಳನ್ನು ಯಾವುದರಲ್ಲಿ ಕೇಳಬೇಕೆಂಬುದನ್ನೂ ತಾವು ಕೇಳಬೇಕು ಮತ್ತು ಮನೆಯಲ್ಲಿ ಅಭ್ಯಾಸ ಮಾಡಿಕೊಂಡು ಬರಬೇಕು. ಇದಕ್ಕೆ ತಾವೆಲ್ಲರೂ ಸಹಕಾರವನ್ನು ಕೊಟ್ಟರೆ ಪ್ರಶ್ನೆಗಳ ಪಟ್ಟಿಯಲ್ಲಿರತಕ್ಕ ಎಲ್ಲಾ ಪ್ರಶ್ನೆಗಳನ್ನೂ 1 ಗಂಟೆಯೊಳಗೆ ಮುಗಿಸುವುದಕ್ಕೆ ಅನುಕೂಲ ವಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಆರ್.ಎನ್. ನಾಯಕ್ :- ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು :- ನಾಯಕರೇ, ನಿಮ್ಮದು ಇನ್ನೇನಿದೆ? ನಾನು ಹೇಳಿದೆನಲ್ಲಾ. ಇದು ಶೂನ್ಯವೇಳೆ ಅಲ್ಲ. ಈಗ ಶೂನ್ಯ ವೇಳೆಯನ್ನು ತೆಗೆದುಕೊಳ್ಳುವುದಿಲ್ಲ.

ಶ್ರೀ ಆರ್.ಎನ್. ನಾಯಕ್ :- ಮಾನ್ಯ ಅಧ್ಯಕ್ಷರೇ, ತಾವು ಅಲ್ಲಿ ಕುಳಿತಿದ್ದೀರಿ. ನಾವು ಇಲ್ಲಿ ಓಡುವ ಕುದುರೆ ಇದ್ದಹಾಗೆ. ನಾವು ಓಡುವುದಕ್ಕೆ ನಿಂತಿದ್ದೇವೆ. ನಾವು ಅಡ್ಡಾದಿಡ್ಡಿ ಓಡಬಹುದು. ಕಡಿವಾಣ ತಮ್ಮಹತ್ತಿರ ಇದೆ. ಆದರೆ ಕುದುರೆಯ ಮುಖವನ್ನು ನೋಡಿ ಆ ಕುದುರೆ ತನಗೆ ಬೇಕಾದ ದಿಕ್ಕಿನಲ್ಲಿ ಓಡಿದಾಗ ಅದಕ್ಕೆ ತಾವು ಅವಕಾಶ ಕೊಡಬೇಡಿ. ಓಡುವ ಎಲ್ಲಾ ಕುದುರೆಗಳಿಗೂ ಒಂದೇ ರೀತಿಯ ಲಗಾಮನ್ನು ಹಚ್ಚಿದರೆ ಪಟ್ಟಿಯಲ್ಲಿರುವ ಎಲ್ಲಾ 20 ಪ್ರಶ್ನೆಗಳನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು :- ತಾವೆಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ತಮಗೆ ಅವಕಾಶ ಕೊಟ್ಟರೆ ಎಲ್ಲರಿಗೂ ಕೊಡಬೇಕಾಗುತ್ತದೆ.

(ಗೊಂದಲ)